ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 1

(ದಿನಾಂಕ 27-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದಃ-

ಈ ದಾವೆಯಲ್ಲಿ ನಾನು ಹಾಜರುಪಡಿಸಿದ ನಿಪಿ-1 ಕ್ರಯಪತ್ರ ಮೂಲ ಪತ್ರವಾಗಿರುತ್ತದೆ. ನಿಪಿ-1 ದಾಖಲೆಯು ಅದು ದೃಢೀಕೃತ ನಕಲು ಅಂದರೆ ಸರಿಯಲ್ಲ. ಸದರಿ ಮೂಲ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಮ್ಮ ದಾವೆಯಲ್ಲಿ ನೀವು ಮೂಲ ಕ್ರಯಪತ್ರವನ್ನು ನೀವು ಹಾಜರುಪಡಿಸಿರುತ್ತೇನಂತಾ ಹೇಳಿ ಬರೆಸಿರುತ್ತೀರಾ ಎಂದರೆ ನೆನಪಿಲ್ಲ. ನನ್ನ ವಾದಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ.

ಸಾಮಾನ್ಯವಾಗಿ ಯಾವುದೇ ಒಂದು ವನೆ, ಆಸ್ತಿಯನ್ನು ಮಾರಾಟ ಮಾಡಬೇಕಾದಲ್ಲಿ ಸದರಿ ಆಸ್ತಿಗೆ ಅದರ ನಂಬರ್, ಚಕ್ಕುಬಂದಿ, ವಿಸ್ತೀರ್ಣ ಇರಬೇಕು ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಮಾರಾಟ ಮಾಡಬೇಕಾಗಿರುವ ಆಸ್ತಿ ದಾಖಲಿದ್ದಲ್ಲಿ ಆ ಆಸ್ತಿಗೆ ಸಂಬಂಧಿಸಿದಂತೆ ಕ್ರಯವಾಗುತ್ತದೆಂದರೆ ಸರಿ. ನೀವು ಹಾಜರುಪಡಿಸಿದ ನಿಪಿ-1 ರಲ್ಲಿ ಆಸ್ತಿಯ ಡೋರ್ ನಂಬರ್ ನಮೂದು ಇದೆಯಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಡೋರ್ ನಂಬರ್ ಇರಲಿಲ್ಲವೆನ್ನುತ್ತಾರೆ. ಆ ಸಮಯದಲ್ಲಿ ಕ್ರಯಕ್ಕೆ ಕೊಡುವ ವ್ಯಕ್ತಿಯ ಸಮಯದಲ್ಲಿ ಕ್ರಯಕ್ಕೆ ಪಡೆದ ಆಸ್ತಿ ಅವರ ಹೆಸರಿನಲ್ಲಿ ದಾಖಲಿತ್ತಾ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ 2 ಡಿಕ್ರಿಯಾಗಿದ್ದವು, ಹೊಲ, ಮನೆ, ಬಯಲು ಜಾಗ ನಮ್ಮ ಅಜ್ಜನ ಹೆಸರಿಗೆ ಕೊಟ್ಟಿದ್ದಾರೆನ್ನುತ್ತಾರೆ. ನಿಪಿ-1 ರಲ್ಲಿ ಬಸಮ್ಮಇವರು ಹಾಲೀ ನನ್ನ ಹೆಸರಿನಲ್ಲಿ ಸದರಿ ಆಸ್ತಿಯ ಪಟ್ಟಾ ಇತ್ತು ಅಂತಾ ಏನಾದರೂ ಹೇಳಿ ಬರೆಸಿದ್ರಾ ಅಂತಾ ಕೇಳಿ ಸಾಕ್ಷಿಗೆ ನಿಪಿ-1ರ ತರ್ಜುಮೆ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ತರ್ಜುಮೆ ಪ್ರತಿಯಲ್ಲಿ ಹಾಲೀ ನನ್ನ ಹೆಸರಿನಲ್ಲಿದ್ದ ಅಂತಾ ಬರೆದಿದ್ದು ಇದೆ ಅಂತಾ ದಾಖಲೆ ನೋಡಿ ಉತ್ತರಿಸಿರುತ್ತಾರೆ. ನಿಪಿ-1ರ ಯಥಾವತ್ತಾಗಿ ತರ್ಜುಮೆ ಪ್ರತಿ ಇರುತ್ತದೆ. ಸದರಿ ಮೇಟಿ ಬಸಮ್ಮ ಇವರ ಹೆಸರಿನಲ್ಲಿ ಆಸ್ತಿ ದಾಖಲಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿದ ದಾಖಲೆಯಂತೆ ನಮ್ಮ ಅಜ್ಜ ಎರಡು ಬಯಲು ಜಾಗ ಮತ್ತು ಮೂರು ಹೊಲ ಖರೀದಿಸಿರುತ್ತಾರೆ. ಮೂರು ಜಮೀನುಗಳ ಸರ್ವೆ ನಂಬರುಗಳು ಮತ್ತು ವಿಸ್ತೀರ್ಣ ಅದು ಯಾವ ಊರಿಗೆ ಸೇರಿದವು ಇರುತ್ತವೆ ಹೇಳಬಹುದಾ ಎಂದರೆ ಸಾಕ್ಷಿಯು ಮೋರಿಗೇರಿ ಗ್ರಾಮದ ಸರ್ವೆ ನಂ.417 ಬಿ ವಿಸ್ತೀರ್ಣ 9 ಎಕರೆ ಚಿಲ್ಲರೆ, 418/ಎ/1 ವಿಸ್ತೀರ್ಣ 8 ಎಕರೆ ಚಿಲ್ಲರೆ, ಇನ್ನೊಂದು ಜಮೀನಿನ

ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 1

ಸರ್ವೆ ನಂಬರು ನೆನಪಿಲ್ಲ ಅದು 4 ಎಕರೆ ಚಿಲ್ಲರೆ ಜಮೀನಿತ್ತು. ಬಯಲು ಜಾಗಕ್ಕೆ ನಂಬರ್ ಇರಲಿಲ್ಲ ಅದರ ವಿಸ್ತೀರ್ಣ ಇವತ್ತಿಗೆ ಪೂ-ಪಃ 62 ಅಡಿ, ಉ-ದಃ 50 ಅಡಿ ಇರುತ್ತದೆ. ಈ ಎಲ್ಲಾ ಜಮೀನು ಮತ್ತು ಬಯಲು ಜಾಗಗಳನ್ನು ಮೇಟಿ ಚನ್ನಬಸಮ್ಮ ಇವರಿಂದಲೇ ನಮ್ಮ ಅಜ್ಜನವರು ಖರೀದಿಸಿರುತ್ತಾರೆ. ನಿಪಿ-1 ರಲ್ಲಿ ಇನ್ನೊಂದು ಬಯಲು ಜಾಗದ ಆ ಸಮಯದಲ್ಲಿನ ಡೋರ್ ನಂಬರ್ ಏನಾದರೂ ನಮೂದು ಇದೆಯಾ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ.

ದಾವಾಸ್ತಿಯ ಚಕ್ಕುಬಂದಿ ಪೂಃ ಗೋಬಜ್ಜಿ ನಾಗೇಂದ್ರಪ್ಪ, ಪಃ ದಾರಿ, ಉಃ ಅವತ್ತಿಗೆ ಉಮ್ಮಜ್ಜಿಗಿ ದೊಡ್ಡಫಕೀರಪ್ಪ ಈಗ ಹಳ್ಳಿ ಮಲ್ಲಪ್ಪ, ದಃ ದಾವೆ ದಾಖಲಿಸಿದವರ ಜಾಗ ಇರುತ್ತದೆ. ಸದರಿ ದಕ್ಷಿಣಕ್ಕೆ ಪ್ರತಿವಾದಿಯರ ಜಾಗ ಬರುತ್ತದೆ ಇವತ್ತಿಗೂ ಅವರೇ ಸ್ವಾಧೀನದಲ್ಲಿರುತ್ತಾರೆ. ಸಾಕ್ಷಿಗೆ 3 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿರುವ ಜಾಗ ಪ್ರತಿವಾದಿಯರದು ಎಂದರೆ ಸಾಕ್ಷಿಯು ಫೋಟೋಗಳನ್ನು ನೋಡಿ ಹೌದು ಅದನ್ನು ಪ್ರತಿವಾದಿಯರು ಅತಿಕ್ರಮಣ ಮಾಡಿ ಗೋಡಿ ಕಟ್ಟಿದ್ದಾರೆ ಅಂತಾ ನುಡಿಯುತ್ತಾರೆ. ಸದರಿ 4 ಫೋಟೋಗಳನ್ನು ನಿಡಿ-1 ರಿಂದ 4 ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿರುವಂತಹ ನಿಪಿ-1 ರಂತೆ ನಾನು ಹೇಳುವ ಆಸ್ತಿ ಹಾಗೂ ಪ್ರತಿವಾದಿಯರ ಆಸ್ತಿ ಬೇರೆ ಎಂದರೆ ಸರಿ. ಇನ್ನೊಂದು ಆಸ್ತಿಯಲ್ಲಿಯೂ ಸಹಾ ನಾವು ಸ್ವಾಧೀನದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ಟಿ ಡಿ ಕೋರ್ಟ ಎಸ್ ಸಿ ನಂ. 697/31 ನೇದ್ದರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ